# ಹತ್ತಿರವಿದ್ದರೂ ದೂರ!





ಬಾಲಿವುಡ್‌ನ ಅತಿರಂಜಿತ ಮಾಜಿ ಪ್ರೇಮಿಗಳ ಪೈಕಿ ರಣಬೀರ್ ಕಪೂರ್ ಮತ್ತು ದೀಪಿಕಾ ಪಡುಕೋಣೆ ಜೋಡಿಯೂ ಒಂದು. ಈ ಜೋಡಿ ದೂರಾಗಿ ರಣಬೀರ್ ಈಗ, ಕತ್ರೀನಾ ಕೈಫ್‌ರತ್ತ ವಾಲಿದ್ದರೆ, ಡಿಪ್ಸ್, ರಣವೀರ್ ಸಿಂಗ್ ತೆಕ್ಕೆಗೆ ಜಾರಿದ್ದಾರೆ. ಈಗ ಈ ಮಾಜಿ ಪ್ರೇಮಿಗಳ ಜೋಡಿ ಮತ್ತೆ ಒಂದಾಗಿದೆ. ನಿಜ ಜೀವನದಲ್ಲಲ್ಲ, ತೆರೆಯ ಮೇಲೆ!

ಡಿಪ್ಸ್ ಮತ್ತು ರಣಬೀರ್ ಒಂದಾಗಿ ನಟಿಸಿದರೆ ಆ ಚಿತ್ರ ಭರ್ಜರಿ ಗೆಲುವು ಕಾಣುವುದು ನಿಶ್ಚಿತ ಎನ್ನುವುದು ಬಾಲಿವುಡ್ ಪಂಡಿತರ ಲೆಕ್ಕಾಚಾರ. ಇಬ್ಬರ ಪ್ರೀತಿ ಮುರಿದು ಬಿದ್ದ ಬಳಿಕವೂ ಒಂದಾಗಿ ನಟಿಸಿದ್ದ 'ಯೇ ದೀವಾನಿ ಹೇ ಜವಾನಿ' ದಾಖಲೆಗಳನ್ನು ಮುರಿದು ಗೆದ್ದಿತ್ತು. ಅದೇ ಲೆಕ್ಕಾಚಾರದಲ್ಲಿ ಇವರಿಬ್ಬರನ್ನೂ ತೆರೆಯ ಮೇಲೆ ಒಂದುಗೂಡಿಸಿದ್ದಾರೆ ನಿರ್ದೇಶಕ ಇಮ್ತಿಯಾಜ್ ಅಲಿ.

ಹಿಂದಿನ ಸಿನಿಮಾದಲ್ಲಿ ಮನಸು ಕದಡಿದ್ದರೂ ಚಿತ್ರೀಕರಣದಲ್ಲಿ ಮಾತ್ರ ಇವರಿಬ್ಬರೂ ತಮ್ಮ ನಡುವೆ ಏನೂ ನಡೆದೇ ಇಲ್ಲವೆಂಬಂತೆ ಅದ್ಭುತವಾಗಿ ಹೊಂದಿಕೊಂಡಿದ್ದರು. ಆದರೆ ಈಗ ಇಬ್ಬರ ನಡುವೆ ಅಂಥ ಕೆಮಿಸ್ಟ್ರಿ ಕಾಣಿಸುತ್ತಿಲ್ಲ ಎನ್ನುತ್ತಿದೆ 'ತಮಾಷಾ' ಚಿತ್ರತಂಡ. ಅದರಲ್ಲೂ ದೀಪಿಕಾ, ರಣಬೀರ್‌ರಿಂದ ಸಾಕಷ್ಟು ಅಂತರ ಕಾಯ್ದುಕೊಂಡಿದ್ದಾರಂತೆ.

ಚಿತ್ರೀಕರಣಕ್ಕೆಂದು ಫ್ರಾನ್ಸ್‌ನಲ್ಲಿ ಚಿತ್ರತಂಡ ಬಿಡಾರ ಹೂಡಿದೆ. ಆದರೆ, ಚಿತ್ರತಂಡ ವ್ಯವಸ್ಥೆ ಮಾಡಿರುವ ಹೋಟೆಲ್‌ನಲ್ಲಿ ದೀಪಿಕಾ ಉಳಿದುಕೊಂಡಿಲ್ಲ. ಬದಲಾಗಿ ಬೇರೆ ಹೋಟೆಲ್ ನೋಡಿಕೊಂಡಿದ್ದಾರಂತೆ. ಚಿತ್ರೀಕರಣದ ವೇಳೆ ಕತ್ರೀನಾ ಕೈಫ್ ಸಹ ಫ್ರಾನ್ಸ್‌ಗೆ ಬರುವ ಸಾಧ್ಯತೆ ಇದೆಯಂತೆ. ಹೀಗಾಗಿ ತನ್ನ 'ಶತ್ರು'ವನ್ನು ಎದುರಾಗಲು ದೀಪಿಕಾ ಸಿದ್ಧರಿಲ್ಲ ಎನ್ನುತ್ತದೆ ಒಂದು ಮೂಲ. ಇನ್ನೊಂದು ಮೂಲದ ಪ್ರಕಾರ, ಫ್ರಾನ್ಸ್‌ಗೆ ರಣವೀರ್ ಸಿಂಗ್ ಸಹ ತೆರಳಲಿದ್ದಾರೆ. ಯಾರ ಕಣ್ಣಿಗೂ ಬೀಳದೆ ಭೇಟಿ ಮಾಡಬಹುದು ಎನ್ನುವುದು ಅವರ ಉದ್ದೇಶ. ರಣಬೀರ್ ಮತ್ತು ತಾವು ಒಂದೇ ಹೋಟೆಲ್‌ನಲ್ಲಿದ್ದಾಗ ರಣವೀರ್ ಸಿಂಗ್ ಅಲ್ಲಿಗೆ ಬಂದರೆ ಮುಜುಗರದ ಪರಿಸ್ಥಿತಿ ಏರ್ಪಡಬಹುದು ಎನ್ನುವುದು ದೀಪಿಕಾರ ಭಯವಂತೆ! ಸಿನಿಮಾಗಿಂತ ನಿಜಜೀವನದ ಸ್ಟೋರಿಯೇ ಮಜಾ ಇದ್ದಂತಿದೆ!



# ಹಸೆಮಣೆಗೇರಲು ದಿಯಾ ರೆಡಿ

ಒಂದೆಡೆ ಬಿ-ಟೌನಿನ ಪ್ರೇಮಕಥೆಗಳ ಒಡಕಿನ ಸುದ್ದಿ ಬರುತ್ತಿದ್ದರೆ, ಇನ್ನೊಂದೆಡೆ ಪ್ರೀತಿ ಮದುವೆಯ ಭಾಗ್ಯ ಕಾಣುವುದನ್ನೂ ನೋಡುತ್ತಿದ್ದೇವೆ. ಆ ಸಾಲಿಗೆ ಹೊಸ ಸೇರ್ಪಡೆ ನಟಿ ದಿಯಾ ಮಿರ್ಜಾ. ಸಾಹಿಲ್ ಸಂಗಾ ಮತ್ತು ದಿಯಾ ತಮ್ಮ ನಡುವಿನ ಪ್ರೀತಿಯನ್ನು ತೀರಾ ಗುಟ್ಟಾಗಿ ಇರಿಸಿಕೊಂಡವರಲ್ಲ. ಮೂರು, ಆರು ತಿಂಗಳಿಗೆ ಹೊಸ ಜೋಡಿ ಹುಡುಕಿಕೊಳ್ಳುವ ಬಾಲಿವುಡ್‌ನ ತಾತ್ಕಾಲಿಕ ಪ್ರೇಮಪ್ರಕರಣಗಳ ನಡುವೆ ಅಪವಾದವೆಂಬಂತೆ ಅಪರೂಪಕ್ಕೆ ಇಂಥ ಗಟ್ಟಿ ಪ್ರೀತಿಯ ಉದಾಹರಣೆಗಳೂ ಸಿಗುತ್ತವೆ. ದಿಯಾರ ಹಳೆ ಪ್ರೇಮ ಪ್ರಕರಣಗಳೇನೇ ಇದ್ದರೂ ಸಾಹಿಲ್ ಜೊತೆ ಹೃದಯ ಬೆಸೆದುಕೊಂಡ ಬಳಿಕ ಅವರು ಮತ್ತೆ ವಿವಾದ ಸೃಷ್ಟಿಸಲಿಲ್ಲ. ಇಬ್ಬರೂ ಸೇರಿ 'ಬಾಬ್ಬಿ ಜಾಸೂಸ್' ಎಂಬ ಸಿನಿಮಾಕ್ಕೆ ಹಣ ಹೂಡಿದ್ದರು. ಹಾಕಿದ ಬಂಡವಾಳದಲ್ಲಿ ವಾಪಸು ಬಂದಿದ್ದು ಅತ್ಯಲ್ಪವಾದರೂ ದಿಯಾ ಅದರಿಂದ ಬೇಸರಪಟ್ಟುಕೊಂಡಿಲ್ಲ. ಸೋಲು ಗೆಲುವು ಇದ್ದದ್ದೇ ಎನ್ನುತ್ತಲೇ ಬದುಕಿನ ದಿಕ್ಕು ಬದಲಿಸುವ ಸೂಚನೆ ನೀಡಿದ್ದಾರೆ ಅವರು.

ಈ ವರ್ಷದ ಅಕ್ಟೋಬರ್‌ನಲ್ಲಿ ದಿಯಾ ಹಸೆಮಣೆ ಏರಲಿದ್ದಾರೆ. ಹಾಗಂತ ಅವರೇ ಘೋಷಿಸಿದ್ದಾರೆ. ಅಂದ ಹಾಗೆ, ದಿಯಾರನ್ನು ಯಾರೂ ಮದುವೆ ಯಾವಾಗ ಎಂದು ಕೇಳಲಿಲ್ಲ. ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ದಿಯಾ, 'ಮಾಧ್ಯಮದವರು ನನ್ನ ಮದುವೆ ಬಗ್ಗೆ ಪತ್ತೇದಾರಿಕೆ ಮಾಡುವ ಕಷ್ಟ ತೆಗೆದುಕೊಳ್ಳುವುದು ಬೇಡ. ಅದಕ್ಕೇ ನಾನೇ ವಿಷಯ ಪ್ರಕಟಿಸಿದ್ದೇನೆ' ಎಂದಿದ್ದಾರೆ!

■ ಅಮಿ